ಆ) ವಿದ್ಯಾ ಸಂಸ್ಥೆಗಳಲ್ಲಿ ಕ್ಯಾಪಿಟೇಶನ್ ಶುಲ್ಕ ವಸೂಲಾತಿಯನ್ನು ವಿರೋಧಿಸುವ ೧೯೮೪ರ ಕಾಯಿದೆ ದಿನಾಂಕ ೧೧-೭-೧೯೮೫ರಿಂದ ಜಾರಿಗೆ ಬರುವ ಮೊದಲು ಪ್ರಾರಂಭವಾದ ಖಾಸಗಿ ಕಾಲೇಜುಗಳು ಮಾತ್ರ ೫ ವರ್ಷಗಳವರೆವಿಗೆ ಕ್ಯಾಪಿಟೇಶನ್ ಶುಲ್ಕ ವಸೂಲು ಮಾಡಲು ಅವಕಾಶ ವಿರುತ್ತದೆ. ಅಂತಹ ಅನುಮತಿ ಪಡೆದ ಕಾಲೇಜುಗಳ ವಿವರಗಳು ಈ ರೀತಿ ಇರುತ್ತದೆ.

	ಆಡಳಿತ ಮಂಡಳಿಗೆ ಲಭ್ಯವಿರುವ ಸ್ಥಾನಗಳು	೫೦,೦೦೦ ರೂ. ಠೇವಣಿ ಯೋಜನೆ ಸ್ಥಾನಗಳು
೧) ಕೆಂಪೇಗೌಡ ವೈದ್ಯಕೀಯ ವಿಜ್ಞಾನ ಸಂಸ್ಥೆ ಬೆಂಗಳೂರು	೯೫	೧೦
೨) ಜೆಜೆಎಂ ವೈದ್ಯಕೀಯ ವಿದ್ಯಾಲಯ ದಾವಣಗೆರೆ	೧೭೦	೧೦
೩) ಎಂಆರ್ ಎಂಸಿ, ಗುಲ್ಬರ್ಗ	೮೫	೧೦
೪) ಜೆಎನ್ ಮೆಡಿಕಲ್ ಕಾಲೇಜು ಬೆಳಗಾಂ	೯೦	೧೦
೫) ಕೆ.ಎಂ.ಸಿ. ಮಂಗಳೂರು ಶಾಖೆ	೯೦	೧೦
೬) ಕೆ.ಎಂ ಸಿ. ಮಣಿಪಾಲ ಶಾಖೆ	೨೦೫	--
೭) ಎಂ.ಎಸ್. ರಾಮಯ್ಯ ಕಾಲೇಜು (ಹೊಸದು ವರ್ಷದ ಸಂಖ್ಯೆ)	೧೪೦	--
೮) ಡಾ. ಅಂಬೇಡ್ಕರ ವೈದ್ಯಕೀಯ ವಿದ್ಯಾಲಯ ಬೆಂಗಳೂರು	೯೫	೧೦
೯) ಸೆಂಟ್‌ಜಾನ್ಸ್ ವೈದ್ಯಕೀಯ ವಿದ್ಯಾಲಯ ಬೆಂಗಳೂರು	೬೦	--

೧) ಹೌದು. ವಿದೇಶಿ ಮತ್ತು ಭಾರತದ ನಿವಾಸಿಗಳಲ್ಲದ ವಿದ್ಯಾರ್ಥಿಗಳಿಗೆ ರೂ. ೨ ಲಕ್ಷ ಮತ್ತು ಇತರರಿಗೆ ರೂ. ೧.೫ ಲಕ್ಷ ಮೀರದಂತೆ ಕ್ಯಾಪಿಟೇಶನ್ ಶುಲ್ಕ ಪಡೆಯಲು ನಿಗಡಿಪಡಿಸಿದೆ.

ಚಿಕ್ಕಮಂಗಳೂರು ನಗರದ ಜನರಲ್ ಆಸ್ಪತ್ರೆಯ ಬಗ್ಗೆ.

೫೩೦. ಶ್ರೀ ಐ. ಬಿ. ಶಂಕರ್(ಚಿಕ್ಕ ಮಂಗಳೂರು).--ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಕ್ಕ ಮಗಳೂರು ನಗರದ ಜನರಲ್ ಆಸ್ಪತ್ರೆಯನ್ನು ೩ ವರ್ಷದಲ್ಲಿ ಪೂರ್ಣಗೊಳಿಸಲು ಸದನದಲ್ಲಿ ಭರವಸೆ ನೀಡಿದ್ದರೂ ಇಲ್ಲಿಯವರೆವಿಗೂ ಪ್ರಾರಂಭಿಸದಿರಲು ಕಾರಣವೇನು ?

ಆ) ಈಗಲಾದರೂ ಕೆಲಸ ಪ್ರಾರಂಭಿಸಲು ಕ್ರಮ ಕೈಗೊಳ್ಳುವರೇ ?

ಶ್ರೀ ಬಿ. ರಾಚಯ್ಯ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).--

ಅ) ನಕ್ಷೆಯ ಪ್ರಕಾರ ನೂತನ ಆಸ್ಪತ್ರೆಯ ಕಟ್ಟಡ ಕಟ್ಟಲು ಈಗಿರುವ ಜಿಲ್ಲಾಧಿಕಾರಿಯವರ ವಸತಿ ಗೃಹವನ್ನು ಕೆಡವಬೇಕಾಗುತ್ತದೆ. ಜಿಲ್ಲಾಧಿಕಾರಿಯವರ ವಸತಿ ಗೃಹವನ್ನು ಕೆಡವದೆ ಆಸ್ಪತ್ರೆ ಕಟ್ಟಡವನ್ನು ಕಟ್ಟಿಸುವ ಬಗ್ಗೆ ಯೋಚಿಸಲಾಗುತ್ತಿದೆ. ಈ ಕಾರಣದಿಂದ ಕಟ್ಟಡ ನಿರ್ಮಾಣವು ಪ್ರಾರಂಭವಾಗಿಲ್ಲ.

ಆ) ಮೇಲಿನ ವಿಷಯದಲ್ಲಿ ನಿರ್ಧಾರವನ್ನು ಕೈಗೊಂಡ ಕೂಡಲೇ ಕೆಲಸವನ್ನು ಪ್ರಾರಂಭಿಸಲಾಗುವುದು.

ರಾಜ್ಯದಲ್ಲಿ ನಡೆದಿರುವ ಕೊಲೆ, ಸುಲಿಗೆ ಇನ್ನಿತರ ಪ್ರಕರಣಗಳ ಬಗ್ಗೆ.

೪. ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ತಿಂಗಳಲ್ಲಿ ರಾಜ್ಯದಲ್ಲಿ ನಡೆದಿರುವ ಕೊಲೆ, ಸುಲಿಗೆ, ಅತ್ಯಾಚಾರ, ದರೋಡೆ ಹಾಗೂ ಇನ್ನಿತರ ಪ್ರಕರಣಗಳ ಸಂಖ್ಯೆ ಎಷ್ಟು ?

ಆ) ಹಾಗಿದ್ದಲ್ಲಿ ಸದರಿ ಪ್ರಕರಣಗಳನ್ನು ಪತ್ತೆ ಹಚ್ಚಲು ಮತ್ತು ತಡೆಗಟ್ಟಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಆರ್. ಎಲ್. ಜಾಲಪ್ಪ (ಗೃಹ ಮಂತ್ರಿಗಳು).—

ಅ) ವಿವರಗಳು ಈ ಕೆಳಕಂಡಂತಿವೆ.

ಕೊಲೆ	...	...	೨೮೧
ಸುಲಿಗೆ	...	...	೧೨೧
ಅತ್ಯಾಚಾರ	...	...	೪೦
ದರೋಡೆ	...	...	೩೧
ಇತರೆ ಐಪಿಸಿ ಪ್ರಕರಣಗಳು	...	...	೧೧,೮೪೯

ಆ) ಎಲ್ಲ ಜಿಲ್ಲಾ ಪೋಲೀಸ್ ಅಧಿಕಾರಿಗಳಿಗೆ ಸಂಶಯಾತ್ಮಕ ವ್ಯಕ್ತಿಗಳನ್ನು ಪರಿಶೀಲಿಸಲು ಹಾಗೂ ನಾಕಾಬಂದಿ ಏರ್ಪಡಿಸಲು ಆದೇಶಿಸಲಾಗಿದೆ. ರಾಷ್ಟ್ರೀಯ ಹೆದ್ದಾರಿಗಳಲ್ಲಿ ದರೋಡೆಗಳನ್ನು ತಡೆಗಟ್ಟಲು ಸಿವಿಲ್ ಪೋಲೀಸ್ ಮತ್ತು ಸಶಸ್ತ್ರ ಪಡೆಯ ವಿಶೇಷ ಗಸ್ತನ್ನು ಏರ್ಪಡಿಸಲಾಗಿದೆ. ಬೆಂಗಳೂರು ನಗರ ಹಾಗೂ ಹೊರ ವಲಯಗಳಲ್ಲಿ ಪೋಲೀಸ್ ಶ್ವಾನದಳ ಹಾಗೂ ನಿಸ್ತಂತು ಸೌಲಭ್ಯ ವಿರುವ ವಾಹನಗಳನ್ನು ಕೊಡಲಾಗಿದೆ. ಪ್ರತಿ ರಾತ್ರಿ ಪರಿಣಾಮಕಾರಿ ಗಸ್ತು ತಿರುಗಲು ಡಿಸಿಪಿಯವರ ನೇತೃತ್ವದಲ್ಲಿ ಗಸ್ತನ್ನು ಏರ್ಪಡಿಸಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸಭೆಯ ಮುಂದೆ ಇಡುತ್ತೇನೆ.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸಭೆಯ ಮುಂದಿಡಲಾಯಿತು.

ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರದಿಂದ ತೆರಿಗೆ ಕೊಟ್ಟಿರುವ ಬಗ್ಗೆ.

೫೭. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೫-೮೬ ಹಾಗೂ ೮೬-೮೭ನೇ ಸಾಲುಗಳ ರಾಜ್ಯದಿಂದ ಕೇಂದ್ರ ಸರ್ಕಾರಕ್ಕೆ ಕೊಟ್ಟ ತೆರಿಗೆ ಹಣ ಎಷ್ಟು ?